ಶ್ರೀ ಕಡಿದಾಳ್ ಮಂಜಪ್ಪ.—ಯಿರಾಸೆ ಯಾರು ಯಾರಿಗೆ ಕೊಡುತ್ತಿದ್ದಾರೆಯೋ ಅವರುಗಳಿಗೆಲ್ಲಾ ಸಂಬಳ ಕೊಟ್ಟರೆ ಇಷ್ಟು ಖರ್ಚಾಗುತ್ತದೆ.

ಶ್ರೀ ಟಿ. ಎಕ್. ಮೂಡಲಗಿರಿ ಗೌಡ.—ಗ್ರಾಮಾಧಿಕಾರಿಗಳಿಗೆಲ್ಲಾ ಸಂಬಳ ಕೊಟ್ಟರೆ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಬಹಳವಾಗುತ್ತದೆ.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ತೋಟಿ ತಳವಾರರ ವಿಷಯವನ್ನು ಮಾತ್ರ ಪರಿಶೀಲನೆಲು ಸಮಿತಿಯನ್ನು ನೇಮಿಸುತ್ತೀರಾ ಅಥವಾ ಶ್ಯಾನುಭೋಗರು, ಪಟೇಲರು ಎಲ್ಲರಿಗೂ ಸಂಬಳ ಕೊಡುವ ವಿಷಯವನ್ನು ಪರಿಶೀಲನೆಲು ಸಮಿತಿಯನ್ನು ನೇಮಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಇನ್ನೂ ಕೆಲವು ಸಮಸ್ಯೆಗಳಿವೆ. ಈ ತೋಟಿ, ತಳವಾರ ಮತ್ತು ಗ್ರಾಮಾಧಿಕಾರಿಗಳಿಗೆ ಅನೇಕ ಕಡೆಗಳಲ್ಲಿ ವಂಶಪಾರಂಪರ್ಯವಾಗಿ ಬಂದ ಹಕ್ಕು ಇದೆ. ಆ ಹಕ್ಕನ್ನು ಅವರು ಆಗ್ಗೆ ಬಿಟ್ಟುಕೊಡುತ್ತಾರೆಯೇ ಎಂಬ ಯೋಚನೆ ಮಾಡಬೇಕಾದ ಅಗತ್ಯವಿದೆ. ಈಗ ಪಟೇಲರು ಮತ್ತು ಶ್ಯಾನುಭೋಗರುಗಳಿಗೆ ಕೂಡ ಪೋಟಿಗಿಯನ್ನು ಕೊಡುತ್ತಿದ್ದೇವೆ. ಅನೇಕ ಕಡೆಗಳಲ್ಲಿ 10 ರೂಪಾಯಿನಿಂದ ಹಿಡಿದು 25 ರೂಪಾಯಿವರೆಗೆ ಪೋಟಿಗಿ ನಲ್ಲುತ್ತಿದೆ. ಅದು ಸಾಲದು ಎಂದು ಪಟೇಲರು, ಶ್ಯಾನುಭೋಗರುಗಳು ವಾದಮಾಡುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ಈಗ ಕೆಲಸಮಾಡುತ್ತ ಇರ ತಕ್ಕಂಥ ತೋಟಿ ತಳವಾರರ ಸಂಖ್ಯೆ ಜಾಸ್ತಿಯಾಗಿದೆ. ಅದನ್ನು ಕಡಿಮೆ ಸಂಖ್ಯೆಗೆ ಇಳಿಸಿ, ಅವರಿಗೆ ಸಂಬಳ ಕೊಟ್ಟು ಕೆಲಸಮಾಡಿಸುವುದರಲ್ಲಿ ಏನು ತೊಂದರೆ ಇದೆ ಎನ್ನುವುದನ್ನು ಯೋಚನೆ ಮಾಡಿದ್ದೀರಾ?

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಶ್ರೀಮಾನ್ ಗುಂಡಪ್ಪಗೌಡರ ವರದಿಯ ಪ್ರಕಾರ, ಪಟೇಲರು ಮತ್ತು ಶ್ಯಾನುಭೋಗರು ಸರ್ಕಾರಿ ನೌಕರರೆಂದು ಪರಿಗಣಿಸಲ್ಪಡಬೇಕಾದ್ದು ಸಹಜವೆಂದು ಹೇಳಿದ್ದಾರೆ. ಅನೇಕರು ಈಗ ಪಟೇಲ ಮತ್ತು ಶ್ಯಾನುಭೋಗರ ಕೆಲಸವನ್ನು ತಾವು ನೋಡಿಕೊಳ್ಳುತ್ತಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಅದು ಈ ಪ್ರಶ್ನೆಗೆ ಸಂಬಂಧಪಟ್ಟುದಲ್ಲ.

ಶ್ರೀ ಜೆ. ನಾರಾಯಣಪ್ಪ.—ಪಟೇಲರು ಸಸ್ಪೆಂಡ್ ಆದರೆ ಸಾವಿರ ರೂಪಾಯಿ ಖರ್ಚು ಮಾಡಲು ಸಾಮರ್ಥ್ಯವುಳ್ಳವರಾಗಿದ್ದಾರೆ. ಆದರೆ ಅದೇ ತೋಟಿ ತಳವಾರರು ಸಸ್ಪೆಂಡ್ ಆದರೆ ಅವರಿಗೆ ಅರ್ಜಿಹಾಕುವುದಕ್ಕೂ ಶಕ್ತಿ ಇಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ತೋಟಿ ತಳವಾರರು ಸಹ ಸರ್ಕಾರದ ಮುಂದೆ ಅಪೀಲು ಹಾಕಿದ್ದಾರೆ. ಕೆಲವು ಈಗಾಗಲೇ ನನ್ನಮುಂದೆ ಇವೆ.

ಶ್ರೀ ಜೆ. ನಾರಾಯಣಪ್ಪ.—ಪ್ರಾಣಹೋಗಲಾರದೆ ಹಾಗೆ ಮಾಡಿರಬಹುದು.

ಶ್ರೀ ಕಡಿದಾಳ್ ಮಂಜಪ್ಪ.—ನಾನು ಆಫೀಸರಾಗಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಈ ಪ್ರಶ್ನೆಯನ್ನು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಾರೆ. ಆದುದರಿಂದ ಮಾನ್ಯ ಸದಸ್ಯರು ಅವರ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಪಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜೆ. ನಾರಾಯಣಪ್ಪ.—ಕೆಲವು ಮಾನ್ಯ ಸದಸ್ಯರು ಈ ನಿರ್ಣಯದ ಪರವಾಗಿ ಮಾತನಾಡಿ ಅದನ್ನು ಒತ್ತಾಯಮಾಡಿ ಸಹಾಯ ಮಾಡಿದುದಕ್ಕಾಗಿಯೂ, ಮಾನ್ಯ ಅಧ್ಯಕ್ಷರು ಈ ನಿರ್ಣಯಕ್ಕೆ ಅವಕಾಶ ಕೊಟ್ಟುದಕ್ಕಾಗಿಯೂ ಅವರಿಗೆ ನನ್ನ ವಂದನೆಗಳನ್ನು ನಲ್ಲಿಸಿ, ಮಾನ್ಯ ಮಂತ್ರಿಗಳು ಕೊಟ್ಟ ಭರವಸೆಯ ಮೇರೆ ಈ ನಿರ್ಣಯವನ್ನ ವಾಪಸು ತೆಗೆದುಕೊಳ್ಳುತ್ತೇನೆ.

The resolution was, by leave, withdrawn.

Resolution No. 5. Amalgamation of Adult Education, Sevadal and Scout Organisations.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಅಧ್ಯಕ್ಷರೇ, ನನ್ನ ಈ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ:

> "This Assembly is of the opinion that Adult Education, Sevadal and Scout Organistions that are existing separately in the State be amalgamated into one."

ನ್ಯಾಮೂ, ನನ್ನ ಸೂಚನೆಯೂದರೂ ಇಷ್ಟೆ. ಈಗಿನ ಸಂದರ್ಭದಲ್ಲಿ ಸಂಗೀತ ನಾಟಕ ಅಕ್ಯಾಡಮಿ, ಸಂಸ್ಕೃತಿ ಪ್ರಚಾರ, ಸೇವಾದಳ, ವಯಸ್ಕರ ಶಿಕ್ಷಣ ಮತ್ತು ಇತರ ಅನೇಕ ಸಂಸ್ಥೆಗಳನ್ನು ಸರ್ಕಾರದವರು ದೇಶದ ಉದ್ಧಾರಕ್ಕಾಗಿ, ದೇಶದ ಜನರು ಜಾಗ್ರತೆಯಿಂದ ಮುಂದುವರಿಯಬೇಕೆಂದು ಸ್ಥಾಪನೆ ಮಾಡಿದ್ದಾರೆ. ಆದರೆ, ಹೀಗೆ ಅನೇಕ ಸಂಸ್ಥೆಗಳನ್ನು ಮಾಡುತ್ತಾ ಮಾಡುತ್ತಾ ಹೋಗುತ್ತಿದ್ದರೆ, ಯಾವುದನ್ನು ಕೇಳಬೇಕು, ಯಾವುದನ್ನು ಬಿಡಬೇಕು ಎಂಬುದನ್ನು ತಿಳಿದುಕೊಳ್ಳುವುದೇ ಜನರಿಗೆ ಕಷ್ಟವಾಗಿದೆ. ಏಕೆಂದರೆ ಪ್ರತಿಯೊಂದು ಸಂಬಂಧದಲ್ಲಿಯೂ ಹೋಗಿ ಸಮಿತಿಗಳನ್ನೂ, ಪ್ರಚಾರಗಳನ್ನೂ ಒಂದೇ ರೀತಿಯಾಗಿ ಮಾಡುತ್ತಿದ್ದೇವೆ. ಹೊನ್ನೆ ಹರಿಜನ ಕಾರ್ಯಫರ್ಡೆಸ್ ಏರ್ಪಡಿಸಿದಾಗ, ಅದರ ಜೊತೆಗೆ ಸಂಸ್ಕೃತಿ ಪ್ರಚಾರವನ್ನೂ ಮಾಡಿದೆವು. ಅನೇಕ ಮಾನ್ಯಸದಸ್ಯರು ಬಜೆಟ್ ಭಾಷಣ ಮಾಡುವಾಗ ಇದೇ ವಿಚಾರವನ್ನು ತಿಳಿಸಿದ್ದಾರೆ. ಈ ಪ್ರಕಾರ ಅನೇಕ ಸಂಸ್ಥೆಗಳು ಸೇರಿ ಒಂದಕ್ಕೊಂದು ಹೊಂದಿಕೊಂಡು ಕೆಲಸ ಮಾಡುವುದಕ್ಕೆ ಅವಕಾಶವಿದೆ. ಬೇರೆ ಬೇರೆ ಸಂಸ್ಥೆಗಳನ್ನಿಟ್ಟು ಕೊಂಡಿರುವುದರಿಂದ ನೌಕರರ ಸಂಖ್ಯೆಯೂ ಜಾಸ್ತಿಯಾಗಿದೆ. ಅನೇಕ ಸಂಸ್ಥೆಗಳಾಗಿ ಜನರು ಒಂದೊಂದರ ಅರ್ಥವನ್ನೂ ತಿಳಿದುಕೊಳ್ಳುವುದೇ ಕಷ್ಟವಾಗುತ್ತಿದೆ.

ಆದ್ದರಿಂದ ಇವುಗಳನ್ನು ಒಂದುಗೂಡಿಸುವ ವ್ಯವಸ್ಥೆ ಮಾಡಬೇಕು. ಇದರಿಂದಾಗಿ ವಯಸ್ಕರ ಶಿಕ್ಷಣ ಸೇವಾದಳ, ಸಂಸ್ಕೃತಿಪ್ರಚಾರ ಈ ಸಂಸ್ಥೆಗಳಿಗೆ ಸರ್ಕಾರ ಖರ್ಚುಮಾಡುತ್ತಿರುವುದರಲ್ಲಿ ಅರ್ಧಮುಕ್ಕಾಲರಷ್ಟು ವ್ಯರ್ಥವಾಗುತ್ತಿದೆ. ಎಲ್ಲಾ ಸಂಸ್ಥೆಗಳನ್ನೂ ಒಂದುಗೂಡಿಸಿ, ದೇಶಾದ್ಯಂತ ಒಂದು ಸ್ಕೀಮಿನ ಪ್ರಕಾರ ಈ ಕಾರ್ಯಗಳು ಸುಗಮವಾಗಿ ನಡೆಯವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳಿ ನಾನು ಈ ನಿರ್ಣಯವನ್ನು ಸಭೆಯ ಮುಂದಿಟ್ಟಿದ್ದೇನೆ. ಈ ಕಾರ್ಯವನ್ನು ಅಗತ್ಯವಾಗಿ ಕೈಗೊಳ್ಳಬೇಕೆಂದು ಮತ್ತೊಂದುಸಾರಿ ನಾನು ಈ ಸಭೆಯಮೂಲಕ ಒತ್ತಾಯ ಮಾಡುತ್ತೇನೆ.

Mr. SPEAKER.—Resolution moved :

"That this Assembly is of opinion that Adult Education, Sevadal and Scout organisations that are existing separately in the State be amalgamated into one."

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ ವಯಸ್ಕರ ಶಿಕ್ಷಣ ಸಮಿತಿ, ಸೇವಾದಳ ಸಂಸ್ಥೆ, ಸ್ಕೌಟ್ ಸಂಸ್ಥೆ—ಇವೆಲ್ಲವೂ ಒಂದಾಗಿ ಕೆಲಸ ಮಾಡುವುದು ಕಷ್ಟವೆಂದು ನಾನು ತಿಳಿದಿದ್ದೇನೆ. ಏಕೆಂದರೆ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಕೆಲಸಮಾಡುವವರು ಕೆಲವು ಆಫೀಸುಗಳಲ್ಲಿ ಕೆಲಸಮಾಡತಕ್ಕವರಾಗಿದ್ದು, ಈ ಸಂಸ್ಥೆಯಲ್ಲೂಸೇರಿ ಕೆಲಸಮಾಡುತ್ತಾರೆ. ಅವರಲ್ಲಿ ಹೆಂಗಸರು, ತರುಣರು, ಮುದುಕರು ಎಲ್ಲರೂ ಸೇರಿದ್ದಾರೆ. ಸ್ಕೌಟ್ ದಳಕ್ಕೆ, ಸೇವಾದಳಕ್ಕೆ ಕೆಲವು ತರುಣರನ್ನು ತಮಗಿರುವ ಅಲ್ಪಸ್ವಲ್ಪ ಅವಕಾಶವನ್ನು ಉಪಯೋಗಿಸಿಕೊಂಡು ಸೇವೆನೆಲ್ಲಿಸಲು ಸೇರಿಸಿಕೊಂಡಿರಬಹುದು. ಹೀಗಿರುವಾಗ ಅವರನ್ನು ಒಂದು ಸಂಸ್ಥೆಯನ್ನುಬಿಟ್ಟು ಇನ್ನೊಂದು ಸಂಸ್ಥೆಗೆ ಹೋಗಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಒಂದೊಂದರ ತತ್ವಗಳೂ ಬೇರೆಬೇರೆ. ಸೇವಾದಳದ ಧ್ಯೇಯ ಸಮಾಜಸೇವೆ ಮಾಡಬೇಕು, ಶಿಸ್ತನ್ನು ಕಲಿಸಬೇಕು, ಸಮಾಜದ ಉನ್ನತಿಗೆ ಹೇಗೆ ಕಷ್ಟಪಟ್ಟು ಕೆಲಸಮಾಡಬೇಕು ಎಂಬುದು. ಅವರು ಜೊತೆಗೆ ವಯಸ್ಕರಿಗೆ ವಿದ್ಯಾಕಲಿಸುವುದನ್ನೂ ಮಾಡುತ್ತಿದ್ದಾರೆ. ಆದರೆ ಸ್ಕೌಟ್ ಎಂಬುದೇ ಬೇರೆ; ಅದೊಂದು ವಿಶ್ವವ್ಯಾಪಿಯಾದಸಂಸ್ಥೆ ಅದುಹೆಚ್ಚಾಗಿ ಬಾಲಕರಿಗಾಗಿಯೇ ಇರುವುದು. ಅವರನ್ನು ದೊಡ್ಡವರಿಗೆ ವಿದ್ಯಾಭ್ಯಾಸ ಹೇಳಿಕೊಡಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಇಲಾಖೆಗಳೆಲ್ಲಾ ಬೇರೆಬೇರೆಯಾಗಿಯೇ ಇರಬೇಕು. ಈ ಮೇಲ್ವಿಚಾರಣೆ ಮಾಡುವುದಕ್ಕೆ ಬೇಕಾದರೆ ಒಬ್ಬರನ್ನೇ ಇಡಬಹುದು. ಆದ್ದರಿಂದ ಒಂದುಗೂಡಿಸಿ ಒಂದೇ ಸಂಸ್ಥೆಯನ್ನೇರ್ಪಡಿಸುವುದು ಸಾಧ್ಯವಿಲ್ಲವೆಂದು ನಾನು ಅಭಿಪ್ರಾಯಪಡುತ್ತೇನೆ.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಅಧ್ಯಕ್ಷರೇ ಶ್ರೀಮಾನ್ ಸಿದ್ದಪ್ಪನವರು ತಂದಿರುವ ನಿರ್ಣಯವನ್ನು ನಾನು ಸ್ವಾಗತಿಸುತ್ತೇನೆ. ಈಗ ಮೈಸೂರು ಸಂಸ್ಥಾನದಲ್ಲಿ ಅಡಲ್ಟ್ ಎಜ್ಯೂಕೇಷನ್ ಕೌನ್ಸಿಲ್, ಸೇವಾದಳ ಮತ್ತು ಸ್ಕೌಟ್ ಸಂಸ್ಥೆ—ಈ ಮೂರಕ್ಕಾಗಿ ಒಟ್ಟು ವರ್ಷಕ್ಕೆ ವರ್ಷಕ್ಕೆ 7 ಲಕ್ಷ ರೂಪಾಯಿಗಳು ಖರ್ಚಾಗುತ್ತಿವೆ. ಸೇವಾದಳ ಮತ್ತು ಸ್ಕೌಟ್ ಸಂಸ್ಥೆ—ಇವೆರಡೂ ಹೆಸರಿನ ಹುಟ್ಟಿಗೆ ಬೇರೆ ಬೇರೆ ಏನಾ, ಎರಡೂ ಮಾಡತಕ್ಕದು Social Work. ಸ್ಕೌಟ್‌ನಲ್ಲಿ ಬಾಲಕರು ಸೇರಿರುವುದಲ್ಲದೆ ದೊಡ್ಡವರೂ ಸಹ ಇದ್ದಾರೆ; ರೋವರ್ಸ್ ಎಂದು ಅವರನ್ನು ಕರೆಯುತ್ತೇವೆ. ಯಾರಾರಿಗೆ ಯಾವಯಾವ ಸಂಸ್ಥೆಗಳಲ್ಲಿ ವಿಶ್ವಾಸವಿದೆಯೋ ಅವರು ಆಯಾ ಸಂಸ್ಥೆಗಳಿಗೆ ಸೇರಿದ್ದಾರೆ. ಎರಡು ಸಂಸ್ಥೆಗಳೂ ಮಾಡುವುದು ಸಮಾಜ ಸೇವೆ. ಅಷ್ಟೇನೂ ಒಂದಕ್ಕೊಂದಕ್ಕೆ ವ್ಯತ್ಯಾಸವಿಲ್ಲ. ಯೂನಿಫಾರಂ ಮಾತ್ರ ಬೇರೆ ಬೇರೆ ಇರಬಹುದು; ಒಂದೇ ಸೇವಾಕ್ಷೇತ್ರ. ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಎಲ್ಲ ಕಡೆಯಲ್ಲೂ ಇಬ್ಬರೂ ಕೆಲಸಮಾಡುತ್ತಾರೆ. ಆದ್ದರಿಂದ ಅವೆರಡಕ್ಕೂ ನಾವು ವ್ಯತ್ಯಾಸವೇನೂ ಮಾಡಬೇಕಾಗಿಲ್ಲ.

ಆಮೇಲೆ Adult Educationನ್ನಿಗೆ ಖರ್ಚು ಮಾಡುತ್ತಿರುವ 5 ಲಕ್ಷ ರೂಪಾಯಿಗಳ ವಿಚಾರದಲ್ಲಿ ನಿನ್ನೆತಾನೆ ಅನೇಕ ಪ್ರಶ್ನೋತ್ತರಗಳು ಬಂದಿದ್ದುವು. ಆ ಸಂದರ್ಭದಲ್ಲಿ ಬಹಳವಾಗಿ ಚರ್ಚೆಮಾಡಿದೆವು. ಇದಕ್ಕಾಗಿ 5 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ; ಪ್ರಪಂಚಕ್ಕೆ ನಾವು ಮಾದರಿಯಾಗಿದ್ದೇವೆಂಬ ಹೆಮ್ಮೆಯೂ ಇದೆ. ಆದರೆ ಈಗ ಅದು ನಡೆಯುತ್ತಿರುವುದಾದರೂ ಹೇಗೆ? ಗ್ರಾಮಾಂತರ ಪ್ರದೇಶಗಳಲ್ಲಿನ ಕೆಲವು ಉಪಾಧ್ಯಾಯರುಗಳನ್ನೇ ಇದರ ಸಂಬಂಧದಲ್ಲಿ ಪಾಠ ಹೇಳಿಕೊಡಲು ನೇಮಿಸಿದ್ದೀರಿ.

ಶ್ರೀ ಎ. ವೆಂಕಟಪ್ಪ (ಚನ್ನಪಟ್ಟಣ).—ಬರೀ ಅಕ್ಷರಾಭ್ಯಾಸವೇ ಇದರ ಉದ್ದೇಶವಲ್ಲ. ಲಿಟ್ರೆಸಿ ಕೌನ್ಸಿಲ್ ಎಂದು ಬೇರೆ ಇದೆ. ಅವರು ವ್ಯಾಕ್ ಇಟ್ಟುಕೊಂಡು ಉಪನ್ಯಾಸಗಳನ್ನೇರ್ಪಡಿಸುವುದು, ಚಿತ್ರ ಪ್ರದರ್ಶನ ಮಾಡುವುದು, ರೈಬ್ರರಿ, ರೀಡಿಂಗ್ ರೂಮುಗಳ ವ್ಯವಸ್ಥೆಮಾಡುವುದು ಎಲ್ಲವನ್ನೂ ಮಾಡುತ್ತಿದ್ದಾರೆ. ಅನಕ್ಷರಸ್ಥ ವಯಸ್ಕರಿಗೆ ಅಕ್ಷರಾಭ್ಯಾಸ ಇವರು ಮಾಡುತ್ತಿರುವ ಅನೇಕ ಕೆಲಸಗಳಲ್ಲಿ ಒಂದು ಮಾತ್ರ.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ (ಕುಣಿಗಲು).—ಎಲ್ಲಾ ಮಕ್ಕಳಿಗೂ ವಿದ್ಯಾಭ್ಯಾಸ ಕೊಡುವಷ್ಟು ಪ್ರೈಮರಿ ಸ್ಕೂಲುಗಳನ್ನು ನಾವಿನ್ನೂ ತೆಗೆದಿಲ್ಲ. ಆದ್ದರಿಂದ ಮಕ್ಕಳಲ್ಲಿಯೂ ಕೂಡ ಅವಿದ್ಯಾವಂತರಾದ ಅನೇಕ ಮಕ್ಕಳಿದ್ದಾರೆಂಬುದನ್ನು ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ತಿಳಿಯಬೇಕು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಪಾಠಶಾಲೆಗಳಿಗೆ ಹೋಗದಿರತಕ್ಕ ಬಾಲಕರಿಗೂ ಮತ್ತು ಇತರ ನಿರಕ್ಷರಸ್ಥರಿಗೂ ಅಕ್ಷರಾಭ್ಯಾಸ ಮಾಡಿಸುವುದು ಇವರ ಕರ್ತವ್ಯ. ಮತ್ತು ಗೊತ್ತಾದಂಥ ಅವಧಿಯಲ್ಲಿ follow on course ಗಳನ್ನೂ ಕೂಡ ಅವರು ನಡೆಸುತ್ತಿದ್ದಾರೆ. ಅನೇಕ ಗ್ರಾಮಗಳಲ್ಲಿ ರೀಡಿಂಗ್ ರೂಮುಗಳು ಕೂಡ ನಡೆಯುತ್ತಿವೆ. ಈ ಬಗ್ಗೆ ಮುನಿಸಿಪಾಲಿಟಿಯಿಂದ ಒಂದು ಕೋಟಾವನ್ನೂ ಪಂಚಾಯಿತಿಗಳಿಂದ ಒಂದು ಕೋಟಾವನ್ನೂ ತೆಗೆದುಕೊಂಡು ವ್ಯವಸ್ಥೆಮಾಡುತ್ತಿದ್ದಾರೆ. ಇದೆಲ್ಲಾ ನರಿಯೇ. ಆದರೆ, ಅವರ ನಿರ್ಣಯವಾದರೂ ಏನು? ಈ ಕೆಲಸಗಳನ್ನೆಲ್ಲಾ ಒಂದು ಸಂಸ್ಥೆಗೆ ಕೊಡುವುದು ಎಂಬುದು. Adult Education ಪದ್ಧತಿಯನ್ನೂ ಇಟ್ಟುಕೊಂಡು, ಸೇವಾದಳ, ಸ್ಕೌಟು ಎರಡನ್ನೂ ಸೇರಿಸಿ ಎಂದು ಹೇಳಿದರೇ ಹೊರತು ಯಾವುದನ್ನೂ ವಜಾ ಮಾಡಿ ಎಂದು ಹೇಳಲಲ್ಲ. ನಿನ್ನೆ ದಿವಸ ನಡೆದ ಚರ್ಚೆಯಲ್ಲಿ ಅನೇಕ ವಿಷಯಗಳು ಹೊರಬಿದ್ದಿವೆ, ಅನೇಕ ಅಭಿಪ್ರಾಯಗಳು ವ್ಯಕ್ತಪಟ್ಟಿವೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನೋಡುವುದಾದರೆ, ಈಗೇನು ಕೆಲಸವಾಗುತ್ತಿದೆಯೋ ಅದನ್ನು ಮೂರು ಸಂಸ್ಥೆಗಳು ಮಾಡುವುದಕ್ಕಿಂತ ಒಂದೇ ಸಂಸ್ಥೆಯಿಂದ ಮಾಡುವುದಕ್ಕೆ ಏರ್ಪಡಿಸುವುದಾದರೆ ಹೆಚ್ಚು ಮುತುವರ್ಜಿಯಿಂದ ಕೆಲಸವಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಒಂದೇ ಸಂಸ್ಥೆಯಿದ್ದರೂ ಅದಕ್ಕೆ ಈ 7 ಲಕ್ಷವಲ್ಲದಿದ್ದರೆ 10 ಲಕ್ಷ ರೂಪಾಯಿಗಳನ್ನಾದರೂ ಕೊಡಿ. ಯೋಜನೆಯ ಪ್ರಕಾರ ಮಾತ್ರ ಕೆಲಸಮಾಡಲಿ. ಆಗ ಏನು ಫಲ ಬರಬೇಕೆಂದು ನಿರೀಕ್ಷಿಸಿದ್ದೇವೋ ಅದನ್ನು ಖಂಡಿತ ಹೊಂದಬಹುದು. ಆದ್ದರಿಂದ ಶ್ರೀಮಾನ್ ಸಿದ್ದಪ್ಪನವರ ನಿರ್ಣಯವನ್ನು ಒಪ್ಪಿಕೊಂಡು ಇವೆಲ್ಲವನ್ನೂ ಒಂದುಗೂಡಿಸಿ ಒಂದು ಸಂಸ್ಥೆಯನ್ನು ಏರ್ಪಡಿಸುವುದು ಉತ್ತಮವೆಂದು ಹೇಳುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಇಲಾಖೆಗಳ ಮಂತ್ರಿಗಳು).—ಸ್ವಾಮಿ, ಈ ನಿರ್ಣಯವನ್ನು ಪರಿಶೀಲನೆ ಮಾಡುವಾಗ ಒಂದು

ಅಂಶವನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕು. ಸೌಕಟ್ ಸಂಸ್ಥೆಯೆಂಬುದು ಒಂದು Semi-Official Body ; Adult Education Council ಮತ್ತು ಸೇವಾದಳ—ಇವುಗಳು ಖಾಸಗೀ ಸಂಸ್ಥೆಗಳು. ಅವರವರ ಉದ್ದೇಶಗಳಿಗನುಗುಣವಾಗಿ ಸೇವಾ ಕ್ಷೇತ್ರಗಳನ್ನು ಅವರು ನಿರೂಪಿಸಿಕೊಂಡಿದ್ದಾರೆ. ಅಂಥವರನ್ನು ನಾವು ಹೀಗೆಯೇ ಮಾಡಬೇಕೆಂದು ಹೇಳುವುದಕ್ಕಾಗುತ್ತದೆಯೇ ? ಸರ್ಕಾರಿ ಇಲಾಖೆಗೆ ಹಾಗೆ ಹೇಳಬಹುದೇ ಹೊರತು ಖಾಸಗೀ ಸಂಸ್ಥೆಗಳಿಗೆ ಹೇಳುವುದಕ್ಕಾಗುವುದಿಲ್ಲ. ನಾವು ಅವರಿಗೆ ಈ ಉದ್ದೇಶದಿಂದ ಕೆಲಸಮಾಡಿ ಎಂದರೆ ಅವರ ಉದ್ದೇಶಕ್ಕೆ ಭಂಗ ತಂದಂತಾಗುತ್ತದೆ. ಆದ್ದರಿಂದ ಸ್ವಾಭಾವಿಕವಾಗಿಯೇ ನಮ್ಮ ಅಭಿಪ್ರಾಯಗಳನ್ನು ಅವರ ಮೇಲೆ ಹೊರಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಎರಡನೆಯದಾಗಿ ಅವುಗಳ ಕ್ಷೇತ್ರಗಳೇ ಬೇರೆ ಬೇರೆ. ಸೌಕಟಿನವರ ಮುಖ್ಯವಾದ ಉದ್ದೇಶ ಚಿಕ್ಕವಯಸ್ಸಿನ ಮಕ್ಕಳಲ್ಲಿ ಗೂಢವಾಗಿರುವ ಗುಣಗಳನ್ನು ವಿಕಾಸಗೊಳಿಸಬೇಕೆಂಬುದು. ಅವರನ್ನು ತಯಾರು ಮಾಡುವುದೇ ಒಂದು ರೀತಿ. It is more or less of an educational character. ಇನ್ನು ಸೇವಾದಳ ತೆಗೆದುಕೊಂಡರೆ, ಅವರು ಕೈಕಸಬು ಮಾಡುವುದು, ಸಮಾಜಸೇವೆ ಮಾಡುವುದು, ಹಿಂದೆಯುದ್ದ ಪದ್ಧತಿಗಳನ್ನು ಪುನರ್ಜೀವನಗೊಳಿಸುವುದು ಅವರ ಕೆಲಸ. ಅವರು ಮಾಡುವುದು ಕಣ್ಣಿಗೆ ಕಾಣುತ್ತಿಲ್ಲ. ಅವರ ಕ್ಷೇತ್ರವೇ ಬೇರೆ. ಅವರು ಮಾಡುವ appeal ಕೂಡ ಬೇರೆ.

ಆಮೇಲೆ Adult Education Council ವಿಚಾರವನ್ನು ಆಗಲೇ ಹೇಳಿದ್ದಾರೆ. ಅಕ್ಷರಾಭ್ಯಾಸ ಮಾಡಿಸುವುದು ಮುಖ್ಯವಾದ ಕೆಲಸ. ಅದರ ಜೊತೆಗೆ ರೀಡಿಂಗ್ ರೂಮುಗಳನ್ನೇರ್ಪಡಿಸುವುದು, lantern slide ಉಪನ್ಯಾಸಗಳು, ಓದುವುದಕ್ಕೆ ಬಾರದೆ ಇದ್ದವರಿಗೂ ಜ್ಞಾನಕೊಡುವುದು—ಇವನೆಲ್ಲಾ ಇದು ಮಾಡುತ್ತಿದೆ. ಆದ್ದರಿಂದ ಒಬ್ಬರ ಕ್ಷೇತ್ರಕ್ಕೂ ಇನ್ನೊಬ್ಬರ ಕ್ಷೇತ್ರಕ್ಕೂ ಹೊಂದಾವಣಿಕೆಯಿರುವುದಿಲ್ಲ. ಆದ್ದರಿಂದ ಈಗಿರುವ ಸಂಸ್ಥೆಗಳನ್ನು ಒಂದುಗೂಡಿಸುವುದಕ್ಕಾಗುವುದಿಲ್ಲ. ಬೇಕಾದರೆ, ಆ ಎಲ್ಲ ಉದ್ದೇಶಗಳನ್ನೊಳಗೊಂಡ ಸಂಸ್ಥೆಯೊಂದನ್ನು ತಾವು ಬೇಕಾದರೆ ಮಾಡಿ. ಅದನ್ನು ಸರ್ಕಾರದವರು ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮಿತ್ರರು ಬೇಕಾದರೆ ಈ ಮೂರರ ಗುಣಗಳನ್ನೂ ಹೊಂದಿರುವ ಒಂದು ಸಂಸ್ಥೆಯನ್ನು ಏರ್ಪಾಡು ಮಾಡಲಿ. ಆಗಬೇಕಾದರೆ ಈ ಪ್ರಶ್ನೆಯನ್ನು serious ಆಗಿ ಯೋಚನೆ ಮಾಡಬಹುದು, ಈಗ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಎಸ್. ಸಿದ್ದಪ್ಪ.—ಸರ್ಕಾರದವರು ಸೂಕ್ತವಾದ ಕಾರ್ಯಕ್ರಮವನ್ನು ಕೈಕೊಳ್ಳುತ್ತೇವೆಂದು ಕೊಟ್ಟಿರುವ ಭರವಸೆಯಮೇರೆ ನಾನು ನನ್ನ ನಿರ್ಣಯವನ್ನು ವಾಪಸು ಪಡೆಯುತ್ತೇನೆ.

The resolution was, by leave, withdrawn.

Resolution No. 6. Construction of a General Hospital in Malleswaram.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಸಭಾಧ್ಯಕ್ಷರೇ, ನನ್ನ ನಿರ್ಣಯ ಈ ರೀತಿ ಇದೆ:

"This Assembly is of the opinion that a General Hospital at a cost of about Three lakhs of Rupees be constructed in Malleswaram as there are many poor people and labourers in this northern extension of Bangalore (Malleswaram Area) and as the Victoria Hospital is far away and overcrowded."

2-30 P.M

ಈಗಿನ ಪರಿಸ್ಥಿತಿ ನೋಡಿದರೆ ಒಂದು ಕಡೆ ತುಂಬ ಸಂತೋಷವಾಗುತ್ತದೆ, ಮತ್ತೊಂದು ಕಡೆ ತುಂಬ ವ್ಯಸನವಾಗುತ್ತದೆ. ಇಂದು ಸರ್ಕಾರದಲ್ಲಿ ಜನತೆಗೆ ಎಷ್ಟರ ಮಟ್ಟಿಗೆ ವಿಶ್ವಾಸವಿದೆಯೆಂಬುದನ್ನು ಹೆಚ್ಚಾಗಿ ಹೇಳಬೇಕಾಗಿಲ್ಲ, ಎಲ್ಲರಿಗೂ ಗೊತ್ತಿದೆ, ಹೆಚ್ಚಾಗಿ ಜನರು ವಿಶ್ವಾಸವನ್ನಿಟ್ಟಿದ್ದಾರೆ. "ಬಲ್ಲವನೇ ಬಲ್ಲ ಬೆಲ್ಲದ ರುಚಿಯ" ಎಂಬ ಹಾಗೆ ಜನರಿಗೆ ಸರ್ಕಾರದ ವಿಷಯ ಚೆನ್ನಾಗಿ ತಿಳಿದಿದೆ, ಇದಕ್ಕೆ ಸಂತೋಷಪಡಬೇಕಾದ್ದು ಆವಶ್ಯಕ. ಸರ್ಕಾರದಲ್ಲಿ ಜನತೆಗೆ ಪ್ರೇಮವಿಲ್ಲವೆಂದು ಹೇಳಿದರೆ ನಾನು ಅಪರಾಧಿಯಾಗುತ್ತೇನೆ. "ನಡೆಯಂತೆ ನುಡಿ" ಎಂಬ ತತ್ವದ ಪ್ರಕಾರ ಜನರು ಕಾದು ನೋಡುತ್ತಿರುತ್ತಾರೆ. ಇದಲ್ಲದೆ ಬಡವರ ಕಾರ್ಯಕ್ರಮಗಳಲ್ಲಿ ಬಹಳವಾಗಿ ಸರ್ಕಾರದವರು ಕೀರ್ತಿಗಳಿಸಿದ್ದಾರೆಂದು ಹೇಳುವುದು ತುಂಬ ಸಂತೋಷಕರ. ಬೆಂಗಳೂರು ನಮ್ಮ ಸಂಸ್ಥಾನದಲ್ಲೇ ಅಲ್ಲದೆ ಪಾಶ್ಚಾತ್ಯ ದೇಶಗಳಲ್ಲೂ ಸಹ ಕೀರ್ತಿಗಳಿಸಿದೆ. ಇದು ಪ್ಯಾರಿಸ್ ಪಟ್ಟಣಕ್ಕೆ ಸರಿಸಮಾನವಾದ ನಗರ. ಅದಕ್ಕಾಗಿಯೇ ಮಾನ್ಯ ಸದಸ್ಯರನೇಕರು ರಜಾ ಸಿಕ್ಕಿದರೂ ಊರಿಗೆ ಹೋಗುವುದಿಲ್ಲ. ಏಕೆಂದರೆ ಇಲ್ಲಿನ ವಾತಾವರಣ ಹಾಗಿದೆ. ಆರೋಗ್ಯ ದೃಷ್ಟಿಯಿಂದ ಮತ್ತು ಇತರ ಸೌಕರ್ಯಗಳ ದೃಷ್ಟಿಯಿಂದ ಇಲ್ಲಿ ಒಂದು ಆಕರ್ಷಣೆಯಿದೆ. ಮಲ್ಲೇಶ್ವರದಲ್ಲಿ ಸಾಧಾರಣವಾಗಿ 60-70 ಸಾವಿರ ಜನಸಂಖ್ಯೆಯಿದೆ. ಅದರಲ್ಲಿ ಕಾರ್ಮಿಕರು, ಹರಿಜನರು, ಬಡವರು ಮುಂತಾದವರೇ ಹೆಚ್ಚಾಗಿದ್ದಾರೆ. ಆಸ್ಪತ್ರೆ ನಮ್ಮ ದೇಶದಲ್ಲಿ ತುಂಬಾ ಮುಖ್ಯವಾದುದಾಗಿದೆ. ಅನ್ನ ಆಹಾರ ಎಷ್ಟು ಅಗತ್ಯವೋ ಅದೇ ರೀತಿಯಲ್ಲಿ ವೈದ್ಯ ಸೌಕರ್ಯವೂ ತುಂಬ ಅಗತ್ಯ. ಆರೋಗ್ಯವಿದ್ದರೆ ಮನುಷ್ಯ ಏನು ಕೆಲಸ ಬೇಕಾದರೂ ಮಾಡಬಹುದು. ಇಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಯು 1900 ನೆಯ ಇಸವಿಯಲ್ಲಿ ಕಟ್ಟಿದ್ದು. ಆಗ ಕೇವಲ 1-1½ ಲಕ್ಷ ಜನಸಂಖ್ಯೆ ಬೆಂಗಳೂರಿನಲ್ಲಿತ್ತು. ಈಗ ಅದು ಹೆಚ್ಚಿದೆ; ಹತ್ತು ಲಕ್ಷಕ್ಕೆ ಮೇಲ್ಪಟ್ಟು ಬೆಂಗಳೂರಿನ ಜನಸಂಖ್ಯೆಯಿದೆ. ಈಗಿನ ಜನಸಂಖ್ಯೆಗನುಸಾರವಾಗಿ ಹಿಂದೆ ಕಟ್ಟಿದ ಆಸ್ಪತ್ರೆಯಲ್ಲಿ ವಾರ್ಡು, ಬೆಡ್ಡುಗಳು ಇಲ್ಲ. ಅವು ಬಹಳ ಕಡಮೆಯಾಗಿವೆ. ಇರುವ ಜಾಗದಲ್ಲೇ ಹೆಚ್ಚು ಬೆಡ್ಡುಗಳನ್ನು ಹಾಕಬೇಕು. ಈ ದಿವಸ ವಿಕ್ಟೋರಿಯಾ ಆಸ್ಪತ್ರೆ ನೋಡಿದರೆ ಬಹಳ ವ್ಯಸನವಾಗುತ್ತದೆ. ಅದಕ್ಕೆ ಅಲ್ಲಿನ ಡಾಕ್ಟರುಗಳಾಗಲಿ ಕೆಲಸಗಾರರಾಗಲಿ ಅಪರಾಧಿಗಳಲ್ಲ. ಸ್ಥಳದ ಅಭಾವದಿಂದ ಬಹಳ ಕಷ್ಟವಾಗಿದೆ. ರೋಗಿಗಳ ಸಂಖ್ಯೆ ಹತ್ತರಷ್ಟು ಹೆಚ್ಚಿರುವಾಗ ಅದಕ್ಕೆ ಸರಿಸಮನಾದ ಸೌಕರ್ಯ ದೊರೆಯುತ್ತಿಲ್ಲ. ಜನಸಂಖ್ಯೆ ಹೆಚ್ಚಿ ಊರು ದೊಡ್ಡದಾಗುತ್ತಿರುವಾಗ ಆಸ್ಪತ್ರೆಗಳೂ ಹೆಚ್ಚಬೇಕಾದದ್ದು ಅಗತ್ಯ. ಆದ್ದರಿಂದ ಮಲ್ಲೇಶ್ವರದಲ್ಲಿ ಒಂದು ಜನರಲ್ ಆಸ್ಪತ್ರೆ ಸ್ಥಾಪಿಸಬೇಕು. ಸರ್ಕಾರ ಮನಸ್ಸು ಮಾಡಿದರೆ ಮಾಡುವುದೇನೂ ಅಗಾಧವಲ್ಲ.